ಕರ್ನಾಟಕ ಸರ್ಕಾರ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ಪಪೂಶಿಇ:ಎನ್.ಎಸ್.ಎಸ್/03/2017.

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18 ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ: 20-04-2017

ಜ್ಞಾಪನ :

ವಿಷಯ: ಪದವಿ ಪೂರ್ವ ಕಾಲೇಜುಗಳಲ್ಲಿ 2017-18 ಸಾಲಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಹೊಸ ಘಟಕಗಳನ್ನು ಮತ್ತು ಹೆಚ್ಚುವರಿ ಘಟಕಗಳನ್ನು ಪ್ರಾರಂಭಿಸಲು ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿರುವ ಬಗ್ಗೆ.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2017-18 ನೇ ಸಾಲಿನಲ್ಲಿ ಪದವಿ ಪೂರ್ವ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಘಟಕಗಳನ್ನು ಹೊಸದಾಗಿ ಪ್ರಾರಂಭಿಸಲು ಮತ್ತು ಹೆಚ್ಚುವರಿ ಘಟಕಗಳನ್ನು (ಎರಡನೆ ಘಟಕಕ್ಕೆ) ಪ್ರಾರಂಭಿಸಲು ಪ್ರಸ್ತಾವನೆಗಳನ್ನು ಕಾಲೇಜುಗಳಿಂದ ಆಹ್ವಾನಿಸಲಾಗಿದೆ. ಆಸಕ್ತ ಕಾಲೇಜುಗಳಿಂದ ಪ್ರಾಂಶುಪಾಲರುಗಳು ಈ ಕೆಳಕಂಡ ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸುವುದು. ಜೂನ್ 15, 2017 ರ ಒಳಗಾಗಿ ಪ್ರಸ್ತಾವನೆಗಳನ್ನು ರಾಜ್ಯಸಂಯೋಜನಾಧಿಕಾರಿಗಳು, ಕೇಂದ್ರಕಛೇರಿ, ಎನ್.ಎಸ್.ಎಸ್, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿಗೆ ಮುದ್ದಾಂ ಆಗಿ ಅಥವಾ ನೊಂದಾಯಿತ ಅಂಚೆ ಮೂಲಕ ಕಳುಹಿಸಲು ಕೋರಿದೆ. ಇಲಾಖೆಯಿಂದ **"ಎನ್.ಎಸ್.ಎಸ್ ಘಟಕ ಮಂಜೂರಾತಿ ಪತ್ರ"** ದೊರೆತ ನಂತರ ಮಾತ್ರ ಕಾಲೇಜುಗಳಲ್ಲಿ ಎನ್.ಎಸ್.ಎಸ್‌ನ ಹೊಸ ಘಟಕ ಅಥವಾ ಹೆಚ್ಚುವರಿ ಘಟಕಗಳನ್ನು ಪ್ರಾರಂಭಿಸುವುದು. **"ಎನ್.ಎಸ್.ಎಸ್ ಘಟಕ ಮಂಜೂರಾತಿ ಪತ್ರ"** ದೊರೆಯದ ಹೊರತು ಕಾಲೇಜುಗಳಲ್ಲಿ ಎನ್.ಎಸ್.ಎಸ್ ಘಟಕ ಕೈಗೊಳ್ಳುವ ಯಾವುದೆ ಚಟುವಟಿಕೆಗಳಿಗೆ ಇಲಾಖೆಯಿಂದ ಅನುದಾನವನ್ನು ಬಿಡುಗಡೆ ಮಾಡಲಾಗುವುದಿಲ್ಲ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

Gayathri Reddy P.R

( ಶ್ರೀಮತಿ.ಗಾಯಿತ್ರಿರೆಡ್ಡಿ.ಪಿ.ಆರ್)
ರಾಜ್ಯ ಸಂಯೋಜನಾಧಿಕಾರಿಗಳು,
ರಾಷ್ಟ್ರೀಯ ಸೇವಾ ಯೋಜನೆ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಮಲ್ಲೇಶ್ವರಂ, ಬೆಂಗಳೂರು.

ಪ್ರತಿ:

1. ಶ್ರೀ.ಎ.ಎನ್.ಪೂಜಾರ್, ಪ್ರಾಂತೀಯ ನಿರ್ದೇಶಕರು, ಪ್ರಾಂತೀಯ ಕೇಂದ್ರ, ಬಸವನಗುಡಿ, ಬೆಂಗಳೂರು.
2. ಸಹಾಯಕ ನಿರ್ದೇಶಕರು, ಇ ಗವರ್ನೆನ್ಸ್ ರವರಿಗೆ ಇಲಾಖೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
3. ಕಛೇರಿ ಪ್ರತಿ.